ಆತ್ಮಕತೆ ಬರೆಯಲು ಶುರು ಮಾಡಿದಂದಿನಿಂದ ನಿಮ್ಮ ಬಗ್ಗೆ ಹೇಳುತ್ತಲೇ ಇದ್ದರು. ಮೂರು ತಿಂಗಳ ಹಿಂದೆ – ಯಾರು ಏನು ಹೇಳಿದ್ರೂ ಹೇಳಲಿ, ನಾನು ಮಂದಾಕಿನಿಗೆ ಫೋನ್ ಮಾಡೋದೇ ಎಂದು ಮಾಡೇ ಬಿಟ್ರು. ಮಂದಾಕಿನೀನ ಕಣ್ತುಂಬಾ ನೋಡಿ ಕಣ್ಮುಚ್ಚಬೇಕು ಎನ್ನುತ್ತಿದ್ರು."

ಗೌಡ್ತಿ ಅಮ್ಮನಿಗೆ ನಾಚಿಕೆಯಾಗಿ ಕೆನ್ನೆಗಳು ಕೆಂಪಾದವು.

"ನಿಮ್ಮ ಮಗ ಮೂಡಿಗೆರೆಯಲ್ಲಿ ಇದ್ದಾಗಲೇ ಬರಬಹುದಿತ್ತಲ್ಲಾ?"

"ಇವರನ್ನು ಬಡತನದ ಕೀಳರಿಮೆ ಕಾಡುತ್ತಿತ್ತು. ಅದಕ್ಕೇ ಹಿಂಜರಿದ್ರು. ನಿಮಗೆ ಹೊಟ್ಟೆಗೆ ಏನು ಕೊಡಲಿ?"

"ಹೊಟ್ಟೆಗೆ ಸಾಕಷ್ಟು ತಿಂದೇ ಬಂದವರು ನಾವು. ದೀಪಕ್‌ರನ್ನು ಕರೆಯಿರಿ."

"ಬನ್ನಿ ಮೇಡಂ. ನಾವೇ ಮೇಲಕ್ಕೆ ಹೋಗೋಣ." ಅವರೆಲ್ಲರೂ ಮಹಡಿ ಹತ್ತಿದರು. ಮಹಡಿ ಇಡೀ ಪುಸ್ತಕದ ಕಪಾಟುಗಳು. ಮೂಲೆಯಲ್ಲಿ ಎರಡು ಕಿಟಕಿಗಳ ಮಧ್ಯೆ ದೀಪಕ್ ಕುಳಿತು ಬರೆಯುತ್ತಿದ್ದ ಮರದ ಕುರ್ಚಿ ಮತ್ತು ಮೇಜು.

"ಈ ಇಡೀ ಮಹಡಿ ಅವರಿಗೆ ಮತ್ತು ಈ ಐದು ಬೆಕ್ಕುಗಳಿಗೆ. ಆ ಮೂಲೆಯಲ್ಲಿ ಕೂತು ಬರೆಯೋದು ಬೇಜಾರಾದಾಗ ಈ ಮರಿಗಳೊಡನೆ ಆಡುವುದು ಅವರ ಕ್ರಮ."

"ಅದೆಲ್ಲಾ ಸರಿ. ಅವರೆಲ್ಲಿ?"

"ಮ್ಯಾಸಿವ್ ಹಾರ್ಟ್ ಅಟ್ಯಾಕಿನಿಂದ ತೀರಿಕೊಂಡರು. ಮೂರು ದಿನಗಳಾದವು."

ದೀಪಕ್ ಹೆಂಡತಿ ಕಣ್ಣೊರಸಿಕೊಂಡಳು. ಗೌಡ್ತಿ ಅಮ್ಮ ತಲೆ ಮೇಲೆ ಕೈ ಹೊತ್ತು ದೀಪಕ್‌ನ ಕುರ್ಚಿಯಲ್ಲಿ ಕುಸಿದು ಕೂತರು.

"ಇದು ಅವರ ಮಾಸ್ಟರ್ ಪೀಸ್. ತೀರಿಕೊಳ್ಳುವ ಮುನ್ನಾ ದಿನ ಬಿಡುಗಡೆ ಆಯ್ತು. ನಿಮಗೊಂದು ಪ್ರತಿ ನೀಡಲು ಹೇಳಿದ್ದಾರೆ. ನಿಮಗೇ ಸಮರ್ಪಿಸಿದ್ದಾರೆ."

ಗೌಡ್ತಿ ಅಮ್ಮ ಪುಟ ತಿರುಗಿಸಿದರು. ಮೂರನೇ ಪುಟದಲ್ಲಿ ಅದು ದೊಡ್ಡ ಅಕ್ಷರಗಳಲ್ಲಿ ಅಚ್ಚಾಗಿತ್ತು.

"ಜೀವನದಲ್ಲಿ ಮೊತ್ತ ಮೊದಲ ಕನಸು ಮೂಡಿಸಿದ ಗೆಳತಿ ಮಂದಾಕಿನಿಗೆ"

"ಅವರನ್ನು ಭಸ್ಮ ಮಾಡಿದ್ದೆಲ್ಲಿ?"

"ಅವರ ಇಚ್ಛೆಯಂತೆ ಬಾಡಿಯನ್ನು ಸ್ಥಳೀಯ ಮೆಡಿಕಲ್ ಕಾಲೇಜಿಗೆ ಡೊನೇಟ್ ಮಾಡಲಾಗಿದೆ."

"ನಾವು ಮೆಡಿಕಲ್ ಕಾಲೇಜಿಗೆ ಹೋದ್ರೆ ಅವರನ್ನು ನೋಡೋಕೆ ಬಿಡ್ತಾರಾ?"

ಪ್ರತಾಪಚಂದ್ರ ಹೇಳಿದರು, "ದಾನವಿತ್ತ ಬಾಡಿಯನ್ನು ಮತ್ತೆ ಯಾರಿಗೂ ಪ್ರದರ್ಶನ ಮಾಡಲ್ಲ!"

"ಆದರೂ ಒಂದು ಪ್ರಯತ್ನ ಮಾಡೋಣ."

ಅವರ ಕಾರು ಮೆಡಿಕಲ್ ಕಾಲೇಜು ಹಾದಿ ಹಿಡಿಯಿತು.


**ಪ್ರಭಾಕರ ಶಿಶಿಲ**

ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ. ಇದುವರೆಗೆ 42 ಸಾಹಿತ್ಯ ಕೃತಿಗಳನ್ನು ಬರೆದಿದ್ದಾರೆ. ಮಹಾಭಾರತವನ್ನು ಆಧಾರಿಸಿ ಇವರು ರಚಿಸಿದ 'ಪುಂಸ್ತ್ರೀ' ಒಟ್ಟು 12 ಭಾಷೆಗಳಿಗೆ ಅನುವಾದಗೊಳ್ಳುತ್ತಿದೆ. ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಶಿಶಿಲರು ರಚಿಸಿರುವ 160 ಕೃತಿಗಳು ಭಾರತದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಅವಲೋಕನ ಕೃತಿಗಳಾಗಿವೆ.